**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಕೊಪ್ಪ**

**ಸಿ. ಸಿ. ನಂ.138/2025**

| | |
|---|---|
| **ಪಿರ್ಯಾಧಿದಾರರುಃ** | ಶ್ರೀ ಶಶಿಕುಮಾರ್ ಹೆಚ್.ಎಸ್. ಬಿನ್ ಲೇಟ್ ಸುಬ್ಬೇಗೌಡ, 50 ವರ್ಷ, ಕೃಷಿಕರು, ವಾಸ ಖಂಡಕ, ಹಾತಾುರು ಗ್ರಾಮ, ಬೆಳ್ಳೂರು ಅಂಚೆ, ಎನ್.ಆರ್.ಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ. |

**-ವಿರುದ್ಧ -**

| | |
|---|---|
| **ಆರೋಪಿಃ** | ಶ್ರೀ ಹೆಚ್.ಜೆ. ಮಂಜುನಾಥ ಬಿನ್ ಲೇಟ್ ಜಗನ್ನಾಥ, 39 ವರ್ಷ, ಪ್ರೆಸ್ ರಿಪೋರ್ಟರ್, ವಾಸ 2 ನೇ ತಿರುವು, ಮಂಜುನಾಥಪುರ, ರಾಯರಾಮತ್, ಮಳಮಡ್ಡಿ ಹತ್ತಿರ, ಹುಬ್ಬಳಿ, ಧಾರವಾಡ ಅಂಚೆ ಪಿನ್ ನಂ.580007. |

- - - - -

**ಆರೋಪಣೆ**

ಆರೋಪಿಯಾದ ನೀವು ಪಿರ್ಯಾದುದಾರರಿಂದ ಪಡೆದುಕೊಂಡ ಸಾಲವನ್ನು ತೀರುವಳಿ ಮಾಡುವ ಸಲುವಾಗಿ ನೀವು ನಿಮ್ಮ ಬಾಬ್ತು ಅವರಿಗೆ ಚೆಕ್ ನಂ. 311419, ರೂ. 1,25,000/-, ದಿನಾಂಕ 20.12.2024 ನ್ನು ನಮೂದಿಸಿದ ಸ್ಟೇಟ್ ಬ್ಯಾಂಕ್ ಆಪ್ ಇಂಡಿಯಾ, ಮಳಮಡ್ಡಿ ಸ್ಟೇಷನ್ ರಸ್ತೆ, ಧಾರವಾಡ ಶಾಖೆಯ ಒಂದು ಚೆಕ್ಕನ್ನು ನೀಡಿದ್ದು, ಪಿರ್ಯಾದಿದಾರರು ಸದರಿ ಚೆಕ್ ಅನ್ನು ಸಿ.ಡಿ.ಸಿ.ಸಿ. ಬ್ಯಾಂಕ್, ಕೊಪ್ಪ ಶಾಖೆಗೆ ಹಾಜರುಪಸಿದಾಗ ನಿಮ್ಮ **"ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ** "ಎಂಬ ಹಿಂಬರಹದೊಂದಿಗೆ ನೀವು ಕೊಟ್ಟಂತ ಚೆಕ್ ವಾಪಸ್ಸಾಗಿದ್ದು ಸದರಿ ಚೆಕ್ ಅಮಾನ್ಯಗೊಂಡ ಬಗ್ಗೆ ನಿಮ್ಮ ಗಮನಕ್ಕೆ ದಿನಾಂಕ 08.01.2025 ರಂತೆ ವಕೀಲರ ಮುಖಾಂತರ ನೋಟೀಸು ನೀಡಿದ್ದು, ಸದರಿ ನೋಟಿಸು ದಿನಾಂಕ 13.01.2025 ರಂದು ನಿಮಗೆ ಜಾರಿಯಾಗಿದಾಗ್ಯೂ ಸಹ ನೀವು ಚೆಕ್ ಬಾಬ್ತು ಹಣವನ್ನು ನೀಡದೇ ವರ್ಗಾವಣೀಯ ಲಿಖಿತ ಅಧಿನಿಯಮ ಕಲಂ 138 ರ ಅಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಪ್ರಶ್ನೆ 1಼ಃ-	ನಿಮಗೆ ಓದಿ ಹೇಳಿದ ಆರೋಪಣೆ ಅರ್ಥವಾಯಿತೇ?

ಉತ್ತರಃ	ತಿಳಿಯಿತು.

ಪ್ರಶ್ನೆ 2಼ಃ-	ಮೇಲಿನ ಆಪಾಧನೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೆ?

ಉತ್ತರಃ	ವಿಚಾರಣೆಯಾಗಬೇಕು.

ಮೇಲಿನ ಆರೋಪಣೆಯನ್ನು ಆರೋಪಿಗೆ ಓದಿ ಹೇಳಿದ ನಂತರ ಅವರು ನೀಡಿದ ಉತ್ತರವನ್ನು ಸ್ವತಃ ನಾನೇ ಬರೆದುಕೊಂಡಿರುವುದು ನಿಜವೆಂದು ದೃಡೀಕರಿಸುತ್ತೇನೆ.

ದಿನಾಂಕ 06.05.2026

ಸಹಿ/- 06.05.2026.
(ಶ್ರೀಮತಿ ನಂದಿನಿ ಎಂ.ಎನ್.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಕೊಪ್ಪ